Accordingly maximum time has been granted to Shri Osman Shah for removal of the above shed constructed but so far he has not removed the same.

Under Section 29 (2) of the Mysore Ancient and Historical Monuments and Archaelogical Sites and Remains Act 1961 the Deputy Commissioner has been empowered to cause the building to be removed.

Therefore, here I request you to kindly take necessary action to remove the shah (Room) constructed by Osman Shah attached to the tombs in Noorbag area in Gulbarga."

ಶ್ರೀ ಎ. ಲಕ್ಷ್ಮೀಸಾಗರ್— ಅದನ್ನು ನನಗೆ ಕಳಿಸಿಕೊಡಿ. ನಾನು ಮುಂದಿನ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಎಸ್. ಕೆ. ಕಾಂತ— ಅವರು ಜಿಲ್ಲಾಧಿಕಾರಿಯವರಿಗೆ ಪತ್ರ ಬರೆದಿದ್ದರೂ ಇದುವರೆಗೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ನಾನು ಪ್ರಶ್ನೆ ಕೇಳಿದ್ದು ಮುಖ್ಯಮಂತ್ರಿಯವರನ್ನು, ಆದರೆ ಇಲ್ಲಿ ನಗರಾಡಳಿತ ಮಂತ್ರಿಯವರು ಉತ್ತರ ಕೊಡುತ್ತಿದ್ದಾರೆ. ಇದು ಏಕೆ ಎಂದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್— ಇದನ್ನು ನನಗೆ ಕಳಿಸಿ ಎಂದು ಹೇಳಿದ್ದೇನೆ. ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

(III) ಬೆಳಗಾಂ ನಗರಸಭೆಯಲ್ಲಿ ಕನ್ನಡ ಭಾಷಾ ಪ್ರದೇಶಗಳನ್ನು ನಿರ್ಲಕ್ಷಿಸಿರುವುದು

ಶ್ರೀ ಬಾಬುರೆಡ್ಡಿ ವಿ. ತುಂಗಳ್— ಮಾನ್ಯ ಅಧ್ಯಕ್ಷರೇ, ಬೆಳಗಾಂ ನಗರಸಭೆಯಲ್ಲಿ ಕನ್ನಡ ಭಾಷಾ ಪ್ರದೇಶಗಳನ್ನು ನಿರ್ಲಕ್ಷಿಸಿರುವ ಬಗ್ಗೆ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ—

ಶ್ರೀ ಎ. ಲಕ್ಷ್ಮೀಸಾಗರ್— ಮಾನ್ಯ ಅಧ್ಯಕ್ಷರೇ, ಈಗ ನನ್ನ ಬಳಿ ಇದರ ಬಗ್ಗೆ ವಿವರಗಳು ಇಲ್ಲ. ಮಾನ್ಯ ಸದಸ್ಯರಿಗೆ ಈ ಬಗ್ಗೆ ಉತ್ತರವನ್ನು ತರಿಸಿಕೊಡುತ್ತೇನೆ.

ಶ್ರೀ ಜಾಬುರೆಡ್ಡಿ ವಿ. ತುಂಗಳ್— ಸಭಾನ್ಯ ಅಧ್ಯಕ್ಷರೇ, ಕಳೆದ ಜನವರಿ ತಿಂಗಳಲ್ಲಿ ವಿರೋಧ ಪಕ್ಷದ ನಾಯಕರಾದಂಥ ಶ್ರೀ ಬಂಗಾರಪ್ಪನವರು ಈ ಸದನದಲ್ಲಿ ಬೆಳಗಾಂ ನಗರ ಸಭೆಯವರು ಸರ್ಕಾರದ ಆಜ್ಞೆಗಳನ್ನು ಉಲ್ಲಂಘನೆ ಮಾಡುತ್ತಿದ್ದಾರೆಂಬ ವಿಷಯವನ್ನು ಇಲ್ಲಿ ಚರ್ಚೆಗೆ ತಂದಿದ್ದಾಗ ಆದಕ್ಕೆ ಪಕ್ಷಬೇಧವಿಲ್ಲದೆ ಈ ಸದನದ ಎಲ್ಲಾ ಸದಸ್ಯರು ಬೆಂಬಲ ಕೊಟ್ಟರು. ಇದಾದ ಮೇಲೂ ಸಹ ಅವರು ಮತ್ತೆ ಯಾಪ ರೀತಿ ನಿಯಮಾವಳಿಯನ್ನು ಉಲ್ಲಂಘನೆ ಮಾಡಿದ್ದಾರೆಂದರೆ, ಬೆಳಗಾಂ ಮಹಾ ನಗರಸಭೆಗೆ ಸಂಬಂಧಪಟ್ಟ ಆಯವ್ಯಯ ಪತ್ರವನ್ನು ಮಂಡನೆ ಮಾಡಿದ ಮೇಲೆ ಅದರ ಮೇಲೆ ಹೆಚ್ಚಿನ ಚರ್ಚೆಗೆ ಅವಕಾಶ ಕೊಡದೆ, ಅಲ್ಲಿನ ವಿರೋಧ ಪಕ್ಷದ ನಾಯಕರು ಮೂರ್ತ ವಿಸರ್ಜನೆಗೆಂದು ಹೊರಗಡೆ ಹೋದ ಸಂದರ್ಭದಲ್ಲಿ ಅಂದರೆ ಕೇವಲ ಒಂದು ನಿಮಿಷದಲ್ಲಿ ಸುಮಾರು ೪ ಕೋಟಿ ರೂಪಾಯಿಗಳ ಆಯವ್ಯಯ ಪತ್ರವನ್ನು ಪಾಸ್ ಮಾಡಿದ್ದಾರೆ.

ಎರಡನೆಯದಾಗಿ ಅಲ್ಲಿ ಕನ್ನಡಿಗರೇ ಹೆಚ್ಚಾಗಿ ವಾಸ ಮಾಡುತ್ತಿರುವ ಹೊಸ ಬಡಾವಣೆಗಳಾದಂಥ ಮಹಾಂತೇಶ ನಗರ, ಬಸವನಗರ, ಶಿವಬಸವನಗರ ಮುಂತಾದ ಬಡಾವಣೆಗಳಲ್ಲಿರುವ ಮೂಲೆ ನಿವೇಶನಗಳ ಮಾರಾಟದಿಂದ ಅಲ್ಲಿನ ನಗರಸಭೆಗೆ ಏಳೂವರೆ ಲಕ್ಷ ರೂಪಾಯಿಗಳಷ್ಟು ಆದಾಯ ಬಂದಿದ್ದರೂ ಸಹ, ಈ ಸಲದ ಆಯವ್ಯಯ ಪತ್ರದಲ್ಲಿ ಕನ್ನಡಿಗರು ಹೆಚ್ಚಿರುವ ಬಡಾವಣೆಗಳ ಅಭಿವೃದ್ಧಿಗೆ ನಾಮಿನಲ್ ಆಗಿ ಕೇವಲ ನಾಲ್ಕೈದು ಸಾವಿರ ರೂಪಾಯಿಗಳನ್ನು ಮೀಸಲಿಟ್ಟು, ಅದೇ ಮರಾಠಿಗರು ಹೆಚ್ಚಿರುವ ವಾಸ ಮಾಡುತ್ತಿರುವ ಬಡಾವಣೆಗಳ ಅಭಿವೃದ್ಧಿಗೆ ೨೦ ಸಾವಿರದಿಂದ ೨೫ ಸಾವಿರದವರೆಗೆ ಹಣವನ್ನು ಮೀಸಲಿಟ್ಟಿದ್ದಾರೆ. ಆದ್ದರಿಂದ ಅಲ್ಲಿನ ಜನರಿಗೆ ಅವರು ನ್ಯಾಯ ಒದಗಿಸಿಕೊಡುವವರೆಗೆ ಅಲ್ಲಿನ

ಆಯವ್ಯಯ ಪತ್ರಕ್ಕೆ ಸರ್ಕಾರದವರು ಮಂಜೂರಾತಿ ಕೊಡಬಾರದೆಂದು ಮತ್ತು ಅದನ್ನ ತಡೆಹಿಡಿಯಂ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್— ಮಾನ್ಯ ಸದಸ್ಯರು ಬೆಳಗಾಂ ನಗರಸಭೆಯಲ್ಲಿ ಮಂಡಿಸಿದ ಆಯವ್ಯಯ ಪತ್ರದ ಮೇಲೆ ಚರ್ಚೆ ಮಾಡಲು ಅವಕಾಶ ಕೊಡದೆ ಪಾಸ್ ಮಾಡಿದ್ದಾರೆಂದು ಒಂದು ಮುಖ್ಯವಾದ ಆಪಾದನೆ ಮಾಡಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡಿ ಆ ಬಗ್ಗೆ ಕಾನೂನು ಪ್ರಕಾರ ಕ್ರಮ ಕೈಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ಅಲ್ಲಿ ಕನ್ನಡಿಗರೇ ಹೆಚ್ಚು ವಾಸ ಮಾಡುತ್ತಿರುವ ಹೊಸ ಬಡಾವಣೆಗಳಲ್ಲಿನ ಕಾರ್ನರ್ ಸೈಟ್‌ಗಳನ್ನು ಬೇರೆ ಬೇರೆ ಭಾಷೆ ಮಾತನಾಡುವ ಜನರಿಗೆ ಭಿನ್ನ ಭಿನ್ನ ರೀತಿಯಲ್ಲಿ ಮಾರಾಟ ಮಾಡಿದ್ದಾರೆ. ಇದರಿಂದ ಹೆಚ್ಚು ಆದಾಯ ಬಂದಿದ್ದರೂ ಸಹ ಆ ಬಡಾವಣೆಗಳ ಅಭಿವೃದ್ಧಿಗೆ ಹೆಚ್ಚು ಹಣ ಕೊಟ್ಟಿಲ್ಲವೆಂದು ಹೇಳಿದ್ದಾರೆ. ಈ ಬಗ್ಗೆ ಅವರಲ್ಲಿರುವ ವಿವರಗಳನ್ನೆಲ್ಲಾ ನನಗೆ ಕಳುಹಿಸಿಕೊಟ್ಟರೆ ನಾನು ಅದನ್ನು ಪರಿಶೀಲನೆ ಮಾಡಿ ಮುಂದಿನ ಕ್ರಮ ಕೈಕೊಳ್ಳುತ್ತೇನೆ. ಬೆಳಗಾಂ ಮಹಾನಗರಸಭೆಯವರು ಕಾನೂನಿನ ಪ್ರಕಾರವೇ ಆಡಳಿತ ನಡೆಸಬೇಕಾಗುತ್ತದೆ. ಅವರು ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡರೆ ಕಾನೂನು ಪ್ರಕಾರ ಕ್ರಮ ಕೈಕೊಳ್ಳುತ್ತೇವೆಂದು ಈ ಹಿಂದೇ ಮುಖ್ಯ ಮಂತ್ರಿಗಳೇ ಹೇಳಿದ್ದಾರೆ. ಈಗ ನಾನೂ ಸಹ ಅದನ್ನೇ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್—ಮಾನ್ಯ ಅಧ್ಯಕ್ಷರೇ. ಬೆಳಗಾಂ ಮಹಾನಗರಸಭೆಯವರು ಅನೇಕ ವಿಷಯಗಳಲ್ಲಿ ತಮ್ಮ ಅಧಿಕಾರದ ಚೌಕಟ್ಟನ್ನು ಮೀರಿ ತೀರ್ಮಾನ ತೆಗೆದುಕೊಳ್ಳುತ್ತಿದ್ದಾರೆ. ಸರ್ಕಾರದ ಕಾನೂನಿಗೆ ವಿರುದ್ಧವಾಗಿ ಅನೇಕ ಕಾರ್ಯಗಳನ್ನು ಮಾಡುತ್ತಿದ್ದಾರೆ. ಅವರು ತಮ್ಮ ಪರಿಮಿತಿಯನ್ನು ಮೀರಿ ಕೆಲಸ ಮಾಡುತ್ತಿರುವ ಕಾರಣದಿಂದ 'ಕನ್ನಡಪ್ರಭ' ಪತ್ರಿಕೆಯಲ್ಲಿ ದಿನಾಂಕ ೧೧-೩-೧೯೮೬ರಂದು ಮಹಾನಗರಸಭೆಯ ಮುಂಗಡ ಪತ್ರ ರದ್ದಾಗಲಿ ಎಂಬ ಶೀರ್ಷಿಕೆಯ ಅಡಿಯಲ್ಲಿ ಒಂದು ಲೇಖನ ಪ್ರಕಟವಾಗಿದೆ. ಇದರಲ್ಲಿ ಕನ್ನಡಿಗರೇ ಹೆಚ್ಚು ವಾಸ ಮಾಡುತ್ತಿರುವ ಬಡಾವಣೆಗಳಾದಂಥ ಮಾಳಮಾರುತಿ, ಮಹಾಂತೇಶ ನಗರ, ಸಂಗಮೇಶನಗರ, ಹಿಂದವಾಡಿ, ನೆಹರೂ ನಗರ, ಬಸವ ನಗರ, ಶಿವಬಸವನಗರ, ಸದಾಶಿವನಗರ, ಆಜಂನಗರ, ಭಾಗ್ಯನಗರಗಳಂತಹ ಹೊಸ ಹೊಸ ಬಡಾವಣೆಗಳ ಅಭಿವೃದ್ಧಿಗೆ ಅಂದರೆ ರಸ್ತೆ ರಿಪೇರಿ, ಒಳಚರಂಡಿ ವ್ಯವಸ್ಥೆ ಮುಂತಾದ ಪೌರ ಸೌಲಭ್ಯಗಳನ್ನು ಕಲ್ಪಿಸಿ ಕೊಡಲಂ ಹೆಚ್ಚು ಹಣವನ್ನು ಆಯವ್ಯಯ ಪತ್ರದಲ್ಲಿ ಒದಗಿಸಿಲ್ಲವೆಂದು ವರದಿ ಆಗಿದೆ. ಈ ವಿಷಯ ಪತ್ರಿಕೆಯಲ್ಲಿ ವರದಿ ಆದ ಕೂಡಲೇ ಸರ್ಕಾರದವರು ಅಲ್ಲಿಂದ ವಿವರಗಳನ್ನು ತರಿಸಿಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಆದರೆ ಯಾವ ಕ್ರಮವನ್ನೂ ಸರ್ಕಾರ ತೆಗೆದುಕೊಂಡಿಲ್ಲ. ಬೆಳಗಾಂ ನಗರದಲ್ಲಿ ಯಾರು ಯಾರೂ ಕನ್ನಡದಲ್ಲಿ ನಾಮಫಲಕಗಳನ್ನು ಹಾಕಿದ್ದಾರೆ. ಅಂತಹ ನಾಮಫಲಕಗಳ ಮೇಲೆ ಡಾಂಬರ್ ಬಳಿಯಬೇಕೆಂದು ಒಂದು ಠರಾವ್ ಪಾಸ್ ಮಾಡಿದ್ದಾರೆ. ಅವರು ತಮ್ಮ ಅಧಿಕಾರದ ಇತಿ ಮಿತಿಯನ್ನು ಮೀರಿ ಕನ್ನಡ ಭಾಷೆ ಮಾತನಾಡುವ ಪ್ರದೇಶಗಳನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಠರಾವ್ ಪಾಸ್ ಮಾಡಿದ್ದಾರೆ. ಹೀಗೆ ಅವರಂ ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ಕೆಲಸ ಮಾಡುತ್ತಿರುವುದರಿಂದ, ಆ ಮಹಾನಗರಸಭೆಯನ್ನು ರದ್ದು ಮಾಡಬೇಕು ಮತ್ತು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ:

ಶ್ರೀ ಎ. ಲಕ್ಷ್ಮೀಸಾಗರ್.— ಸನ್ಮಾನ್ಯ ಅಧ್ಯಕ್ಷರೇ, ಕಾನೂನಿಗೆ ವಿರುದ್ಧವಾಗಿ ಬೆಳಗಾಂ ನಗರಸಭೆಯವರು ತಮ್ಮ ಕಾರ್ಯಕ್ರಮಗಳನ್ನು ನಡೆಸಿದರೆ, ಅದನ್ನು ತಡೆಯ ತಕ್ಕ ಅಧಿಕಾರ ಸರ್ಕಾರಕ್ಕೆ ಇದೆ. ಆದ್ದರಿಂದ ಆ ದಿಕ್ಕಿನಲ್ಲಿ ಸರ್ಕಾರ ಕ್ರಮ ಕೈಕೊಳ್ಳುತ್ತದೆಂದು ಈ ಹಿಂದೆ ಮುಖ್ಯ ಮಂತ್ರಿಗಳೂ ಸಹ ಇಲ್ಲಿ ಹೇಳಿದ್ದಾರೆ, ಈಗ ನಾನೂ ಸಹ ಅದೇ ಮಾತನ್ನು ಹೇಳಂತ್ತೇನೆ. ಅಲ್ಲಿರುವ ಕನ್ನಡ ಭೂಮಿಯನ್ನು ಬೇರೆ ಯಾರಿಗೂ ಮಾರಾಟ ಮಾಡುವುದಕ್ಕೆ ನಾವು ಬಿಡುವುದಿಲ್ಲ.

ಶ್ರೀ ಬಾಬುರೆಡ್ಡಿ ವಿ. ತುಂಗಳ್,— ನೀವು ಕೇವಲ ಕಾರ್ಯಕ್ರಮ ಕೈಕೊಳ್ಳುತ್ತೇವೆಂದು ಹೇಳಿದರೆ ಹೇಗೆ? ಈಗಾಗಲೇ ಅವರು ಈ ಕೆಲಸ ಮಾಡುತ್ತಿದ್ದಾರೆ ನೀವು ಕೂಡಲೇ ಕ್ರಮ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಅಧ್ಯಕ್ಷರೇ, ಮಾನ್ಯ ಬಾಬುರೆಡ್ಡಿ ತಂಗಳ್ ಅವರು ನನ್ನ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ. ಈ ವಿಚಾರ ಇಲ್ಲಿ ಈ ಹಿಂದೆ ಕೂಡ ಪ್ರಸ್ತಾಪಕ್ಕೆ ಬಂದಿತ್ತು. ಇದು ಮಾನ್ಯ ಲಕ್ಷ್ಮೀಸಾಗರ್ ಅವರಿಗೂ ಗೊತ್ತಿರಬೇಕು. ಅಲ್ಲಿನ ನಗರಸಭೆಯವರು ತಮ್ಮ ಅಧಿಕಾರದ ಮಿತಿಯಲ್ಲಿ ಯಾವುದೇ ನಿರ್ಣಯವನ್ನು ಪಾಸ್ ಮಾಡಬಹುದು. ಆದರೆ ಅಲ್ಲಿನ ಗಡಿ ಪ್ರದೇಶಗಳು ಮಹಾರಾಷ್ಟ್ರಕ್ಕೆ ಸೇರಬೇಕು ಎಂದು ನಿರ್ಣಯ ಮಾಡಲು ಅವರಿಗೆ ಅಧಿಕಾರ ಇದೆಯೇ? ಇದು ಮುನಿಸಿಪಲ್ ಆಕ್ಟ್‌ನಲ್ಲಿ ಬರುತ್ತದೆಯೇ? ಅವರು ತಮ್ಮ ಅಧಿಕಾರದ ವ್ಯಾಪ್ತಿಯನ್ನು ಮೀರಿ ಕೆಲವು ನಿರ್ಣಯಗಳನ್ನು ಕೈಕೊಳ್ಳುತ್ತಿದ್ದಾರೆ, ಇದನ್ನು ತಡೆಗಟ್ಟಬೇಕೆಂದು ಈ ಹಿಂದೆಯೇ ಇಲ್ಲಿರುವ ಎಲ್ಲಾ ಪಕ್ಷದವರು ಹೇಳಿದ್ದಾರೆ. ಇದಕ್ಕೆ ಸರ್ಕಾರದಿಂದ ಉತ್ತರ ಸಹ ಬಂದಿದೆ. ಆ ದಿನ ಈ ಬಗ್ಗೆ ಮುಖ್ಯ ಮಂತ್ರಿಗಳು ಏನು ಹೇಳಿಕೆ ಕೊಟ್ಟರೆಂದರೆ, ಸರ್ಕಾರಕ್ಕೆ ಇದರ ಅರಿವು ಇದೆ, ಕಾನೂನಿನ ಚೌಕಟ್ಟಿನಲ್ಲಿ ಈ ರೀತಿ ಅವರು ನಿರ್ಣಯಗಳನ್ನು ಪಾಸ್ ಮಾಡುವುದಕ್ಕೆ ಅವಕಾಶವಿಲ್ಲದಿದ್ದರೂ ಸಹ ಅವರು ತಮ್ಮ ವ್ಯಾಪ್ತಿಯನ್ನು ಮೀರಿ ಹೋಗಿದ್ದಾರೆ. ಇದು ಅವರು ಉದ್ಧಟತನದ ಪರಮಾವಧಿ ಎಂದು ಹೇಳಿದ್ದಾರೆ. ಇದರ ಬಗ್ಗೆ ನೀವು ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ? ಅವರು ರೆಸೆಲ್ಯೂಷನ್‌ನ್ನು ಪಾಸ್ ಮಾಡಿ ಬೆಳಗಾಂನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ತೀರ್ಮಾನ ಮಾಡಿದ್ದಾರೆ. ಈ ತರಹ ರೆಸೆಲ್ಯೂಷನ್‌ನ್ನು ಅವರು ಪದೇ ಪದೇ ಮಾಡುತ್ತಲೇ ಇದ್ದಾರೆ. ನಾನು ವಂರಾಠಿ ಮಾತನಾಡತಕ್ಕ ಜನರನ್ನು ತೆಗಳುತ್ತಿಲ್ಲ. ಆದರೆ ಅವರು ಮಾಡುತ್ತಿರುವುದು ಸರಿಯಲ್ಲ. ಬೆಳಗಾಂ ಮುನಿಸಿಪಾಲಿಟಿಯವರು ಈ ತರಹ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಬಿಡಬಾರದಾಗಿತ್ತು. ಅವರ ಮೇಲೆ ತೀವ್ರ ಕ್ರಮವನ್ನು ತೆಗೆದುಕೊಳ್ಳಬೇಕು ಹಾಗೂ ಆ ನಿರ್ಣಯವನ್ನು ಅನೂರ್ಜಿತಗೊಳಿಸಬೇಕು. ಮರಾಠರು ಸಹ ನಮ್ಮ ಸಹೋದರರು ಅವರ ಬಗ್ಗೆ ನನಗೆ ಸ್ವಲ್ಪವೂ ಅಸಮಾಧಾನ ಇಲ್ಲ. ಆದರೆ ಕನ್ನಡನಾಡಿನಲ್ಲಿ ಅವರು ಇದ್ದುಕೊಂಡು ಈ ತರಹ ನಿರ್ಣಯವನ್ನು ಮಾಡಬಾರದಾಗಿತ್ತು. ಬೆಳಗಾಂ ಮುನಿಸಿಪಾಲಿಟಿಯವರು, ಎಲ್ಲೆಲ್ಲಿ ಮರಾಠಿ ಜನರು ವಾಸಿಸುತ್ತಿದ್ದಾರೋ ಅಂತಹ ಕಡೆಗಳಲ್ಲಿ ಎಲ್ಲಾ ತರಹ ಸಿವಿಕ್ ಅಮಿನಿಟಿಸ್ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ. ಆದರೆ ಕನ್ನಡಿಗರು ವಾಸಿಸುವಂಥ ಬಡಾವಣೆಗಳಲ್ಲಿ ನೀರಿನ ಸೌಕರ್ಯ ಇಲ್ಲ ಬೀದಿದೀಪದ ಸೌಕರ್ಯ ಇಲ್ಲ, ಯಾವುದೇ ತರಹದ ನಾಗರೀಕ ಸೌಲಭ್ಯಗಳನ್ನು ಒದಗಿಸಿಕೊಟ್ಟಿಲ್ಲ. ಇಂತಹ ತಾರತಮ್ಯವನ್ನು ಬೆಳಗಾಂ ನಗರ ಸಭೆಯವರು ಮಾಡಬಾರದಾಗಿತ್ತು. ಕನ್ನಡ ಮಾತನಾಡತಕ್ಕವರೇ ಇರಲಿ ಬೇರೆ ಯಾವುದೇ ಭಾಷೆ ಮಾತನಾಡತಕ್ಕ ಜನರೇ ಇರಲಿ ಅವರುಗಳಿಗೆ ನಗರ ಸಭೆಯವರು ನಿಷ್ಪಕ್ಷಪಾತವಾಗಿ ನಾಗರೀಕ ಸೌಲಭ್ಯಗಳನ್ನು ಒದಗಿಸಿಕೊಡುವುದು ಅವರ ಜವಾಬ್ದಾರಿ. ಈಗ ಮಾನ್ಯ ಸದಸ್ಯರುಗಳು ಎತ್ತಿರುವ ವಿಷಯ ಬಹಳ ಗಂಭೀರವಾಗಿದೆ. ಅದನ್ನು ಸರ್ಕಾರ ಅಷ್ಟೇ ಗಂಭೀರವಾಗಿ ಪರಿಗಣಿಸಿ ಇದಕ್ಕೆ ಸರಿಯಾದ ಮಾರ್ಗವನ್ನು ಕಂಡುಹಿಡಿಯಬೇಕು. ಬೆಳಗಾಂ ನಗರ ಸಭೆಯವರು ಏನು ರೆಸೆಲ್ಯೂಷನ್‌ಗಳನ್ನು ಪಾಸ್ ಮಾಡಿದ್ದಾರೆ. ಅವುಗಳನ್ನು ಕೂಡಲೇ ಸರ್ಕಾರವು ತರಿಸಿಕೊಂಡು ಅನೂರ್ಜಿತಗೊಳಿಸಬೇಕು. ಯಾವುದೇ ಸಂದರ್ಭದಲ್ಲಿ ಯಾಗಲೀ ಮಹಾಜನ್ ವರದಿಯ ಅನುಸಾರವಾಗಿ ನಾವು ನಡೆಯುತ್ತೇವೆ. ಅದರ ವಿರುದ್ಧವಾಗಿ ನಡೆಯುವುದಕ್ಕೆ ನಾವು ಬಿಡುವುದೆಲ್ಲವೆಂದು ಅವರಿಗೆ ತಿಳಿಸಬೇಕು. ಮಹಾಜನ್‌ರವರನ್ನು ಈ ಹಿಂದೆ ಕೇಂದ್ರ ಸರ್ಕಾರವು ನೇಮಿಸಿ ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕೇಳಿಕೊಂಡರು. ಮಹಾಜನ್‌ರವರು ಸಂಪೂರ್ಣವಾಗಿ ಅಧ್ಯಯನ ನಡೆಸಿ ಯಾರಿಗೂ ಪಕ್ಷಪಾತವಾಗದಂತೆ ಗಡಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದಕ್ಕೆ ದಾರಿಯನ್ನು ತೋರಿಸಿದರು. ಆದರೆ ಮಹಾರಾಷ್ಟ್ರದವರು ಈ ಮಹಾಜನ್‌ರವರಿಯನ್ನು ಕಡೆಗಣಿಸಿ ತಮ್ಮದೇ ಆದ ಮೊಂಡು ವಾದವನ್ನು ಮತ್ತೆ ಮಾಡುತ್ತಿದ್ದಾರೆ. ನಾವು ಮಾತ್ರ ಮಹಾಜನ್ ವರದಿಯನ್ನು ಸಂಪೂರ್ಣವಾಗಿ ಒಪ್ಪಿಕೊಂಡಿದ್ದೇವೆ. ಈ ವರದಿಯಲ್ಲಿ ಯಾವ ರೀತಿ ತಿಳಿಸಿದೆಯೋ ಅದೇ ರೀತಿ ವಿಭಜನೆ ಮಾಡಿಕೊಳ್ಳುವುದಕ್ಕೆ ನಮ್ಮದು ಯಾವುದೇ ಅಭ್ಯಂತರ ಇಲ್ಲ. ಈ ಬೆಳಗಾಂ ಮುನಿಸಿಪಾಲಿಟಿಯವರು ಮಾಡಿರುವ ನಿರ್ಣಯವು ಮಹಾಜನ್ ವರದಿಗೆ ಸಂಪೂರ್ಣವಾಗಿ ವಿರುದ್ಧವಾಗಿದೆ. ಕರ್ನಾಟಕ ರಾಜ್ಯದ ಜನರ ಹಿತ ರಕ್ಷಣೆ ಮಾಡುವುದಕ್ಕೋಸ್ಕರವಾಗಿ ಇದರ ಬಗ್ಗೆ ಸರ್ಕಾರವು ತೀವ್ರವಾದ ಕ್ರಮವನ್ನು ಮುನಿಸಿಪಾಲಿಟಿ ಮೇಲೆ ತೆಗೆದುಕೊಳ್ಳಬೇಕು, ರಾಜಕೀಯಕ್ಕೋಸ್ಕರ ರಾಜ್ಯದ ಹಿತವನ್ನು ಕಡೆಗಣಿಸಬಾರದು. ಮಹಾರಾಷ್ಟ್ರ ಮತ್ತು ಕರ್ನಾಟಕದ ಗಡಿವಿವಾದ ಇದುವರೆಗೆ ಬಗೆಹರಿಯಲಾರದಂಥ ಜ್ವಲಂತ ಸಮಸ್ಯೆಯಾಗಿ ಈ ಸಮಸ್ಯೆಯು ಬೃಹದಾಕಾರವಾಗಿ

ಬೆಳೆಯಂವುದಕ್ಕೆ ಅವಕಾಶ ಮಾಡುತ್ತಿದ್ದೇವೆ. ಇದರ ಬಗ್ಗೆ ಸರ್ಕಾರ ತನ್ನ ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದ ಪರವಾನಿಗೆ ಇಲ್ಲದೇ ಯಾವುದೇ ಮುನಿಸಿಪಾಲಿಟಿಯವರು ತಮ್ಮದೇ ಆದ ರೀತಿಯಲ್ಲಿ ನಿರ್ಣಯಗಳನ್ನು ಮಾಡಿಕೊಂಡು, ಆ ನಿರ್ಣಯದಿಂದ ಜನರಿಗಾಗಲೀ ಸರ್ಕಾರಕ್ಕಾಗಲೀ, ತೊಂದರೆಯಾಗುವ ಹಾಗಿದ್ದರೆ, ಅಂಥ ನಿರ್ಣಯಗಳನ್ನು ಸರ್ಕಾರ ಅನೂರ್ಜಿತಗೊಳಿಸುತ್ತದೆ, ಯಾರೇ ಆಗಲೀ ತಮಗಿರುವ ಅಧಿಕಾರದ ವ್ಯಾಪ್ತಿಯನ್ನು ಮೀರಿ ಕೆಲಸಗಳನ್ನು ಮಾಡುವುದಕ್ಕೆ ಅಥವಾ ಅಧಿಕಾರವನ್ನು ಚಲಾಯಿಸುವುದಕ್ಕೆ ಸರ್ಕಾರ ಬಿಡುವುದಿಲ್ಲ ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ಸರ್ಕಾರ ಯಾವುದೇ ಕಾರಣದಿಂದ ಅಡ್ಡಿಬರುವುದಿಲ್ಲ. ಆಮೇಲೆ ಕನ್ನಡಿಗರು ಇರುವ ಬಡಾವಣೆಗಳಲ್ಲಿ ನಾಗರೀಕ ಸೌಲಭ್ಯಗಳನ್ನು ಕೊಡದೇ ಮರಾಠಿ ಜನರು ಇರುವ ಕಡೆಗಳಲ್ಲೇ ಸೌಲಭ್ಯಗಳನ್ನು ಒದಗಿಸುತ್ತಿರುವ ಬಗ್ಗೆ ಮಾನ್ಯ ಸದಸ್ಯರು ತಿಳಿಸಿದ್ದಾರೆ. ಆ ರೀತಿ ಮಾಡುವುದನ್ನು ಸರ್ಕಾರ ಕ್ಷಮಿಸುವುದಿಲ್ಲ. ಬೆಳಗಾಂ ನಗರ ಸಭೆಯಂಪರಿಗೆ ಇದನ್ನು ತಿಳಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ, ಮಾನ್ಯ ಸದಸ್ಯರ ಮನಸ್ಸಿನಲ್ಲಿ ಕನ್ನಡಿಗರ ಬಗ್ಗೆ ಇರುವ ಕಳಕಳಿ ನನಗೂ ಅರ್ಥವಾಗಿದೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ದಯವಿಟ್ಟು ಕುಳಿತುಕೊಳ್ಳಿ

ಶ್ರೀ ಎ. ಲಕ್ಷ್ಮೀಸಾಗರ್.—ಕಾರ್ಪೊರೇಷನ್ ಆಕ್ಟ್ ಪ್ರಕಾರ, ಯಾವ ಕಾರ್ಪೊರೇಷನ್‌ರವರು ತಮಗಿರುವ ಅಧಿಕಾರ ವ್ಯಾಪ್ತಿಗಿಂತ ಹೆಚ್ಚು ಅಧಿಕಾರವನ್ನು ಚಲಾಯಿಸುತ್ತಾರೋ ಅಂತಹ ಕಾರ್ಪೊರೇಷನ್ ವಿರುದ್ಧ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಆ ಕಾನೂನಿನ ಪ್ರಕಾರ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಶೀಘ್ರವಾಗಿ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ತಕ್ಷಣ ಮಾಡುತ್ತೇನೆ.

ಶ್ರೀ ಚಂದ್ರಶೇಖರ್ ಮಾಮನಿ.—ಎಷ್ಟು ದಿವಸದಲ್ಲಿ ಮಾಡುತ್ತೀರಿ ಹೇಳಬೇಕು.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಬೆಳಗಾಂ ಮುನಿಸಿಪಾಲಿಟಿಯವರು ಆಕ್ಷೇಪಾರ್ಹವಾದ ಯಾವುದೇ ನಿರ್ಣಯವನ್ನು ಮಾಡಿದರೂ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಮತ್ತು ಅದನ್ನು ಅನೂರ್ಜಿತಗೊಳಿಸುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ. ಅದರ ಬಗ್ಗೆ ಸರ್ಕಾರ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತದೆ.

(ಗೊಂದಲ)

ಶ್ರೀ ಜಿ, ನಾರಾಯಣಕುಮಾರ್.—ಅಧ್ಯಕ್ಷರೇ ತಾವು ಕೋಪಪಡಿಕೊಳ್ಳಬಾರದು. ಬೆಳಗಾಂನಲ್ಲಿ ಕನ್ನಡಕ್ಕೆ ಮಸಿ ಬಳಿಯುತ್ತಿದ್ದರೆ, ಅದನ್ನು ನೋಡಿಕೊಂಡು ಸರ್ಕಾರ ಸುಮ್ಮನೆ ಕುಳಿತುಕೊಳ್ಳಬಾರದು. ತಕ್ಷಣ ಆ ಮುನಿಸಿಪಾಲಿಟಿಯನ್ನು ರದ್ದು ಪಡಿಸಿದರೆ ನಾವು ಸರ್ಕಾರಕ್ಕೆ ಚಿರರುಣಿಯಾಗಿರುತ್ತೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಕಾರ್ಪೊರೇಷನ್ ಆಕ್ಟ್ ಪ್ರಕಾರ, ಎಲ್ಲಾ ಕಾರ್ಪೊರೇಷನ್‌ನವರು, ಅವರವರು ಪಾಸ್ ಮಾಡಿರತಕ್ಕ ನಿರ್ಣಯಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಬೇಕೆಂದು ನಿಯಮ ಇದೆ. ಆ ರೀತಿ ಕಳುಹಿಸಿದ ನಿರ್ಣಯಗಳನ್ನು ಸರ್ಕಾರ ಪರಿಶೀಲನೆ ಮಾಡಿ ತನ್ನ ಅನುಮತಿಯನ್ನು ಕೊಡುತ್ತದೆ. ಕಾನೂನು ಪ್ರಕಾರ ಆ ನಿರ್ಣಯಗಳು ಇಲ್ಲ ಎಂದರೆ ಅವುಗಳನ್ನು ಸರ್ಕಾರ ರದ್ದು ಮಾಡುತ್ತದೆ. ಹಾಗೂ ಅವರುಗಳಿಗೆ ಶೋಕಾಸ್ ನೋಟೀಸ್‌ನ್ನು ಕೊಡಲಾಗುತ್ತದೆ, ಇಂತಹ ಕಾರ್ಪೊರೇಷನ್‌ಗಳನ್ನು ನಾವು ಏಕಾಏಕಿ ರದ್ದು ಮಾಡಿಬಿಟ್ಟರೆ, ಅವರುಗಳು ಹೈಕೋರ್ಟಿಗೆ ಹೋಗುತ್ತಾರೆ ಮತ್ತೊಂದು ಕಡೆ ಹೋಗುತ್ತಾರೆ, ಸ್ಟೇ ಆರ್ಡರ್‌ಗಳನ್ನು ತರುತ್ತಾರೆ. ಆದ್ದರಿಂದ

ನಾವು ದುಡುಕಿ ಕೆಲಸ ಮಾಡುವುದಕ್ಕಿಂತ ಮುಂಚಿತವಾಗಿ, ಅವರು ಮಾಡಿರುವ ನಿರ್ಣಯಗಳನ್ನು ತರಿಸಿಕೊಂಡು ಕೂಲಂಕಷವಾಗಿ ಪರಿಶೀಲನೆ ಮಾಡಿ, ಅವರು ಕಾನೂನಿಗೆ ವಿರುದ್ಧವಾಗಿ ನಿರ್ಣಯಗಳನ್ನು ಮಾಡಿದ್ದರೆ, ಅವರು ಯಾವುದೇ ರೀತಿಯಲ್ಲಿ ತಪ್ಪಿಸಿಕೊಳ್ಳುವುದಕ್ಕೆ ಆಗದಂತೆ ಏರ್ಪಾಡುಗಳನ್ನು ಮಾಡಿ ಅವರ ವಿರುದ್ಧ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಜಿ. ನಾರಾಯಣಕುಮಾರ್.— ಇಂತಹ ಕಾರ್ಪೊರೇಷನ್‌ಗಳನ್ನು ಸೂಪರ್‌ಸೀಡ್ ಮಾಡಬೇಕು.

ಅಧ್ಯಕ್ಷರು.—ಮಾನ್ಯ ನಾರಾಯಣಕುಮಾರ್‌ರವರೆ ತಾವು ಕುಳಿತುಕೊಳ್ಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಆಪಾದನೆ ಬಂದ ತಕ್ಷಣ ಸೂಪರ್‌ಸೀಡ್ ಮಾಡತಕ್ಕಂಥ ಕೆಲಸ ಸರ್ಕಾರಕ್ಕೆ ಶೋಭೆ ತರತಕ್ಕಂತದ್ದಲ್ಲ. ಅವರ ಆತಂಕ ಏನು ಎಂಬುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಕಾನೂನು ವಿರುದ್ಧ ಅವರು ನಿರ್ಣಯವನ್ನು ಮಾಡಿದ್ದರೆ ಅವುಗಳನ್ನು ರದ್ದುಪಡಿಸುವ ಹಾಗೆ ಕಾರ್ಯಕ್ರಮವನ್ನು ಬೇಗ ಮಾಡುತ್ತೇನೆ.

೧–೩೦ ಪಿ.ಎಂ.

ಶ್ರೀ ಜಿ. ನಾರಾಯಣ್‌ಕುಮಾರ್.—ಆದಷ್ಟು ಬೇಗ ಎಂದರೆ ಯಾವಾಗ ? ಕನ್ನಡಿಗರಿಗೆ ಅಲ್ಲಿ ಅನ್ಯಾಯವಾಗುತ್ತಿದ್ದರೂ ನೀವು ಕಾನೂನನ್ನು ಮುಂದಿಟ್ಟುಕೊಂಡು ಕೆಲಸ ಮಾಡದೆ ಹೋದರೆ ಹೇಗೆ? ಮಾನ್ಯ ಮಂತ್ರಿಗಳ ಕೈಯಲ್ಲಿ ಸರಿಯಾದ ಒಂದು ಹೇಳಿಕೆಯನ್ನು ಹೇಳಿಸಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಚಂದ್ರಕಾಂತ್ ಜಿ. ಬೆಲ್ಲದ್ ಅವರೇ ತಾವು ಏನು ಹೇಳುತ್ತೀರಿ ?

ಶ್ರೀ ಜಿ. ನಾರಾಯಣ್‌ಕುಮಾರ್.—ಕನ್ನಡಿಗರೆಲ್ಲರೂ ಅಲ್ಲಿ ಕಣ್ಣೀರು ಇಡುತ್ತಿದ್ದಾರೆ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.—ಕಾನೂನಿನ ಚೌಕಟ್ಟನ್ನು ಮೀರಿ ಅನೇಕ ಕೆಲಸಗಳನ್ನು ಅವರು ಮಾಡಿದ್ದರಿಂದ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತಿದ್ದೇನೆ. ಈ ರೀತಿ ಅವರು ಮಾಡುವ ಕೆಲಸಗಳನ್ನು ನಿಲ್ಲಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿಸಿಕೊಳ್ಳುತ್ತಿದ್ದೇನೆ. ಅಷ್ಟೇ ಅಲ್ಲಿನ ಕನ್ನಡ ಶಾಸಕ ಸದಸ್ಯರು ಇಲ್ಲಿಂದ ಮುಂಬಿ ಮಂತ್ರಿಗಳನ್ನು ಕರೆದುಕೊಂಡು ಹೋಗಿ ಮನವಿಯನ್ನು ಕೊಟ್ಟಿದ್ದಾರೆ. ಅದನ್ನು ಪರಿಶೀಲಿಸಿ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂಬುದೇ ನಮ್ಮ ಉದ್ದೇಶವಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಆಗಲಿ ಸ್ವಾಮಿ.

ಶ್ರೀ ಬಿ. ವಿ. ತುಂಗಲ್.— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಅದು ಒಂದು ಸ್ವಯತ್ತ ಸಂಸ್ಥೆಯೆಂದು ಹೇಳಿದರು. ಅದರ ಬಗ್ಗೆ ನನ್ನ ಆಕ್ಷೇಪವಿಲ್ಲ. ಮರಾಠಿಗಳ ಬಗ್ಗೆ ನಮಗೆ ಎಳ್ಳಷ್ಟು ದುರುದ್ದೇಶವಿಲ್ಲ. ಮಾನ್ಯ ಬಂಗಾರಪ್ಪನವರು ಹೇಳಿದ ಹಾಗೆ ಬೆಳಗಾಂ ಮಹಾನಗರ ಮಹಾರಾಷ್ಟ್ರಕ್ಕೆ ಹೋಗಬೇಕು ಎಂಬ ಗೊತ್ತುವಳಿಯನ್ನು ಒಂದಲ್ಲ ಹತ್ತು ಸಲ ಇವರು ಸ್ವೀಕಾರ ಮಾಡಿದ್ದಾರೆ. ಪ್ರತಿಸಾರಿ ರೆಫ್ಯೂಲ್ಯೂಷನ್ ಪಾಸ್ ಮಾಡುತ್ತಾರೆ. ಬೆಳಗಾವಿ ಮಹಾನಗರ ಜನತೆಗೆ ಬೀದಿ ದೀಪ ಸಿಗಬೇಕಾದರೆ, ನಾಗರೀಕ ಸೌಲಭ್ಯ ಸಿಗಬೇಕಾದರೆ ಬೆಳಗಾವಿ ಮಹಾರಾಷ್ಟ್ರಕ್ಕೆ ಹೋಗಬೆಕೆಂದು ಪ್ರತಿ ವರ್ಷವೂ ಗೊತ್ತುವಳಿಯನ್ನು ಮಾಡುತ್ತಾರೆ. ಇದರ ಬಗ್ಗೆ ತಾವು ಏಕೆ ಕ್ರಮ ತೆಗೆದುಕೊಂಡಿಲ್ಲ ? ಬೆಳಗಾಂ ಮಹಾನಗರ ಸಭೆಯ ಮೇಲೆ ತ್ರಿವರ್ಣ ಧ್ವಜ ಇಡಿ. ಅಶೋಕ ಚಕ್ರದ ಧ್ವಜ ಇಡಿ. ಆದರೆ ಬೆಳಗಾಂ ಮಹಾನಗರ ಸಭೆಯ ಮೇಲೆ ಭಗವಾನ್ ಜಾಂಡ್ ಇದೆ. ಇದು ಸರಿಯೇ ? ನೀವು ಏಕೆ ಇದರ ಬಗ್ಗೆ ಸಂವ್ಯನಿದ್ದೀರಿ ? ಕನ್ನಡಿಗರೇನೂ ಹೇಡಿಗಳಲ್ಲ ಕೋಲಾರದಲ್ಲಿ ಹಾರಿಸಲಿ, ತಮಿಳುನಾಡಿನಲ್ಲಿ ಹಾರಿಸಲಿ, ಕರ್ನಾಟಕಕ್ಕೆ ಏಕೆ ಈ ಹೇಡಿತನ ಬಂದಿದೆಯೆಂದು ಕೇಳುತ್ತೇನೆ. ಇದನ್ನು ನೋಡಿ ನಮ್ಮ ರಕ್ತ ಕುದಿಯುತ್ತದೆ. ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಭಗವಾನ್ ಧ್ವಜವನ್ನು ತೆಗೆಸುತ್ತೇನೆಂದು ಧೈರ್ಯವಿದ್ದರೆ ಹೇಳಲಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ತುಂಗಲ್ ಅವರು ಏನು ಹೇಳಿದ್ದಾರೆ ಅದಕ್ಕೆ ಹೇಳಿ ?

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಎರಡು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ ಪ್ರತಿ ವರ್ಷವೂ ಬೆಳಗಾಂ ಮಹಾನಗರ ಸಭೆಯವರು ಈ ಪ್ರದೇಶವೂ ಮಹಾರಾಷ್ಟ್ರಕ್ಕೆ ಹೋಗಬೇಕೆಂದು ನಿರ್ಣಯ ಮಾಡುತ್ತಿರುತ್ತಾರೆಂದು ಒಂದನೆಯದು ಅಧಿಕಾರವಿಲ್ಲದಿರತಕ್ಕ ಮನುಷ್ಯರು ಅಥವಾ ಒಂದು ಪ್ರಾಧಿಕಾರ ತಮ್ಮ ಕಾನೂನು ವ್ಯಾಪ್ತಿಯೊಳಗೆ ಒಳಪಡದಿರತಕ್ಕ ವಿಚಾರದಲ್ಲಿ ಏನು ನಿರ್ಣಯ ಮಾಡಿದರೂ ಅದಕ್ಕೆ ಬೆಲೆ ಇಲ್ಲ. ಆ ಕಾಗದದ ಮೇಲೆ ಏನು ನಿರ್ಣಯ ಮಾಡಿದ್ದಾರೆ ಆ ಕಾಗದಕ್ಕೆ ತಗಲತಕ್ಕ ವೆಚ್ಚಕ್ಕಿಂತಲೂ ಕಡಿಮೆ ಬೆಲೆ ಅದಕ್ಕೆ ಇರುತ್ತದೆ. ಅವರು ನಿರ್ಣಯ ಮಾಡಿದ್ದರೂ ಅದನ್ನು ನಾವು ಕಿತ್ತು ಹಾಕುತ್ತೇವೆ. ಕಾನೂನಿಗೆ ವಿರುದ್ಧವಾಗಿ ಮಾಡಿದ ಪ್ರತಿಯೊಂದು ಸಭೆಯದಲ್ಲೂ ಕೂಡ ಆ ನಿರ್ಣಯವನ್ನು ತರಿಸಿಕೊಂಡು ಅವರಿಗೆ ಶೋ–ಕಾಸ್ ನೋಟೀಸ್ ಕೊಟ್ಟನಂತರ ಅದನ್ನು ಅನುರ್ಜಿತಗೊಳಿಸಬೇಕಾಗಿದೆ. ಅವರು ನಿರ್ಣಯವನ್ನು ಪಾಸ್ ಮಾಡಿದ್ದೇವೆಂದು ಪೇಪರ್‌ನಲ್ಲಿ ಬಂದರೂ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ಸಾಧ್ಯವಿಲ್ಲ. ನಾನು ಕಾನೂನು ಬಿಟ್ಟು ಮಾತಾನಾಡುವುದಕ್ಕೆ ಆಗುವುದಿಲ್ಲ, ಎರಡನೆಯ ವಿಚಾರ. ಅವರು ತಮ್ಮದೇ ಆದ ಬಾವುಟವನ್ನು ಹಾಕಿಕೊಂಡಿದ್ದಾರೆಂದು ಹೇಳಿದ್ದಾರೆ. ಇದು ನನಗೆ ಈಗ ಮೊದಲನೆಯ ಸಲ ಗೊತ್ತಾಗಿರುವುದು. ಅದರ ಬಗ್ಗೆ ವರದಿ ತರಿಸಿ ಕಾನೂನು ದೃಷ್ಟಿಯಿಂದ ಅದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನತಕ್ಕ ಮಾತನ್ನು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆ, ಕೇಳೋಣ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಈಗ ಉತ್ತರ ಕೊಟ್ಟಿದ್ದಾರೆ. ಕಾನೂನು ಪ್ರಕಾರ ಅವರ ಉತ್ತರ ಸರಿಯಾಗಿದೆ. ಕಾರ್ಪೊರೇಷನ್, ಮುನಿಸಿಪಾಲಿಟಿ ಅಥವಾ ಯಾವುದೇ ಇರಬಹುದು ಅದು ಕಾನೂನು ವ್ಯಾಪ್ತಿಯೊಳಗೆ ಆ ನಿರ್ಣಯಗಳನ್ನು ಮಾಡಬೇಕು. ಈಗ ಅವರು ತಮ್ಮ ಕಾನೂನು ವ್ಯಾಪ್ತಿ ಮೀರಿ ಮಾಡಿದ್ದಾರೆ ಎನ್ನುವುದನ್ನು ಎಲ್ಲರೂ ಒಪ್ಪತಕ್ಕ ವಿಚಾರ. ಗಡಿಯ ಬಗ್ಗೆ ಏನು ತೀರ್ಮಾನ ಮಾಡಿದ್ದಾರೆ ಅದು ಅವರ ಕಾನೂನು ವ್ಯಾಪ್ತಿಗೆ ಮೀರಿರತಕ್ಕ ನಿರ್ಣಯ. ಆ ನಿರ್ಣಯ ಊರ್ಜಿತಗೊಳ್ಳುವುದಿಲ್ಲ ಎನ್ನುನ ಮಾತು ಸತ್ಯ ಸಂಗತಿ. ವೈಡ್ ಅಬಿನಿಷಿಯೋ ಯಾವುದೇ ನಿರ್ಣಯ ಮಾಡಿದರೂ ಕೂಡ ಅದು ಸರ್ಕಾರಕ್ಕೆ ಬರಲೇಬೇಕಾಗುತ್ತದೆ. Under the provision of the Act ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಅಲ್ಲದೆ ಇದು ಎಷ್ಟರಮಟ್ಟಿಗೂ ಗೊತ್ತಿರತಕ್ಕ ವಿಚಾರ. ಮಾನ್ಯ ಸದಸ್ಯರು ಹೇಳಿದಹಾಗೆ ಮೊಟ್ಟಮೊದಲು ಈ ರೀತಿ ನಿರ್ಣಯ ಮಾಡಿದ್ದಾರೆ ಎನ್ನತಕ್ಕ ಪ್ರಶ್ನೆಯಲ್ಲ. even long before this resolution was adopted such a resolution was passed, ಹಾಗಿದ್ದರೆ ಹಿಂದೆ ಆಗಿರತಕ್ಕ ನಿರ್ಣಯ ಯಾವುದು ? ಎಷ್ಟು ಆಗಿವೆ ? ನಿಮಗೆ ತಾರೀಖು ಹೇಳುವುದಕ್ಕೆ ಕಷ್ಟವಾಗುತ್ತದೆ. ಅದನ್ನು ನಾನು ಒಪ್ಪುತ್ತೇನೆ. ತಾವು ಅಧಿಕಾರಕ್ಕೆ ಬಂದಮೇಲೆ ಆ ನಿರ್ಣಯ ತರಿಸಿಕೊಂಡಿರಬಹುದು ಅಥವಾ ಅದಕ್ಕಿಂತಲೂ ಹಿಂದೆ ಇದೇ ಸರ್ಕಾರ ಆ ನಿರ್ಣಯವನ್ನು ತರಿಸಿಕೊಂಡಿರಬಹುದು. ಜನರ ಒಂದು ಅಭಿಪ್ರಾಯ ಏನೆಂದರೆ ಆ ರೀತಿ ನಿರ್ಣಯ ಆದಾಗ ಅದು ಕಾನೂನು ವ್ಯಾಪ್ತಿಗೆ ಮೀರಿರತಕ್ಕ ನಿರ್ಣಯವೆಂದು ಸರ್ಕಾರಕ್ಕೆ ಕಂಡು ಬಂದರೆ ತಾವು ಅಂತಹ ನಿರ್ಣಯಗಳನ್ನು ತರಿಸಿ ಈ ನಿರ್ಣಯ ಊರ್ಜಿತಗೊಳ್ಳುವುದಿಲ್ಲ ಎನ್ನತಕ್ಕದ್ದನ್ನು ಎಷ್ಟೋ ಸಾರಿ ತಿಳುವಳಿಕೆ ಹೇಳಿದ್ದೇವೆ ಈ ರೀತಿಯ ಉದಾಹರಣೆಗಳು ಇವೆ. ಕಳೆದ ಸಾರಿ ನಾವು ಕೇಳಿದ್ದೇವೆ. ಆ ನಿರ್ಣಯವನ್ನು ತರಿಸುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಆ ನಿರ್ಣಯವನ್ನು ತರಿಸಿ ಕಾರ್ಯಕ್ರಮ ತೆಗೆದು ಕೊಳ್ಳುತ್ತೇವೆ ಎನ್ನತಕ್ಕ ಮಾತನ್ನು ಈ ಸದನದಲ್ಲೇ ತಿಳಿಸಿದ್ದೀರಿ. ಈ ರೀತಿ ತಿಳಿಸಿ ಹೆಚ್ಚು ಕಡಿಮೆ ಒಂದು ತಿಂಗಳಾಯಿತು. ಈಗ ಆ ನಿರ್ಣಯ ಬಂದಿದೆ ಕರ್ನಾಟಕ ರಾಜ್ಯದ ಗಡಿಗಳು ಮಹಾರಾಷ್ಟ್ರಕ್ಕೆ ಸೇರಬೇಕು ಎಂಬ ನಿರ್ಣಯವನ್ನು ಅವರು ತಮ್ಮ ಕಾನೂನಿನ ವ್ಯಾಪ್ತಿಗೆ ಮೀರಿ ಮಾಡಿದ್ದಾರೆ ಆ ನಿರ್ಣಯವನ್ನು ತಾವು ತರಿಸಿಕೊಂಡಿದ್ದೀರಾ? ತರಿಸಿಕೊಂಡಿದ್ದರೆ ನೀವು ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ತಕ್ಷಣದಲ್ಲೆ ಮಾಹಿತಿಯನ್ನು ತಮಗೆ ಒದಗಿಸಿಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಈಗ ನಮ್ಮ ಒತ್ತಡ ಇಷ್ಟೆ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಕೇಳಿದ ಭಾಷೆಯಲ್ಲೇ ನಾವು ಉತ್ತರ ಕೊಡುವುದಕ್ಕಾಗುವುದಿಲ್ಲ. ಸರ್ಕಾರದ ಕಾನೂನಿನ ಮಂತ್ರಿಯಾಗಿ ಯಾವರೀತಿ ನಾನು ಹೇಳುತ್ತೇನೆ.

ಶ್ರೀ ಜಿ. ನಾರಾಯಣಕುಮಾರ್.—ನಮ್ಮದು ಕನ್ನಡ ಭಾಷೆ. ಒಂದು ತಿಂಗಳು ಅಥವಾ ಎರಡು ತಿಂಗಳ ಗಡುವು ತೆಗೆದುಕೊಂಡು ಪರಿಶೀಲನೆ ಮಾಡುತ್ತೇನೆಂದು ಹೇಳಿದರೆ ಅದಕ್ಕೆ ಅರ್ಥವಿಲ್ಲವೇ ?

ಅಧ್ಯಕ್ಷರು.—ವಿರೋಧ ಪಕ್ಷದ ನಾಯಕರು ಮಾತನಾಡುವುದಕ್ಕೆ ಶುರು ಮಾಡಿದ್ದಾರೆ. ತಾವು ಅವಕಾಶ ಕೊಡಿ ಚನ್ನಪ್ಪನವರೆ. ಈ ಗಮನ ಸೆಳೆಯುವ ಸೂಚನೆಯಲ್ಲಿ ತಾವು ಸಹಿ ಮಾಡಿಲ್ಲ. ಆದ್ದರಿಂದ ತಮಗೆ ಅವಕಾಶವಿಲ್ಲ.

ಶ್ರೀ ಎಚ್. ಟಿ. ಚನ್ನಪ್ಪ.—ಅವಕಾಶವಿಲ್ಲ ಎಂದರೆ ಏನರ್ಥ,

ಅಧ್ಯಕ್ಷರು.— ನಿಮಗೆಲ್ಲಾ ಎಬಿಸಿಡಿ ನಾನು ಹೇಳಿಕೊಡಬೇಕೇ ?

ಶ್ರೀ ಎಚ್. ಟಿ. ಚನ್ನಪ್ಪ.— ಅವಕಾಶ ಇಲ್ಲ ಎಂದರೆ ನಾವೆಲ್ಲಾ ಏಕೆ ಇಲ್ಲಿ ಇರಬೇಕು, ನಮ್ಮನ್ನೆಲ್ಲಾ ಹೊರಗಡೆ ಕಳುಹಿಸಿಬಿಡಿ. ನಿಮಗೆ ಯಾರೂ ಬೇಕೋ ಅವರನ್ನು ಕುಳ್ಳಿರಿಸಿಕೊಂಡು ಅಸೆಂಬ್ಲಿ ಮಾಡಿ. ನೀವು ಹೇಳುವುದರಲ್ಲಿ ಏನೂ ಅರ್ಥವಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಸಂಬಂಧಪಟ್ಟ ವಿವರಣೆಗಳು ತಮ್ಮಲ್ಲಿ ತತ್‌ಕ್ಷಣ ಇಲ್ಲದಿದ್ದರೂ ಕೂಡ, ಕ್ರಮ ತೆಗೆದುಕೊಳ್ಳುವುದರಲ್ಲಿ ಸ್ವಲ್ಪ ವಿಳಂಬವಾಗಿದೆ. ಅವರು ಮಾಡಿದ ನಿರ್ಣಯಗಳು ನಿಮ್ಮ ಗಮನಕ್ಕೆ ಬಂದು, ತುಂಬಾ ಸಮಯ ಕಳೆದುಹೋಗಿದೆ ಎನ್ನುವ ವಿಚಾರ ಈಗ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ತತ್‌ಕ್ಷಣ ವಿವರಗಳು ನನ್ನ ಹತ್ತಿರ ಇಲ್ಲ. ಅದಕ್ಕೋಸ್ಕರವಾಗಿ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತೊ, ಅದನ್ನು ತೆಗೆದುಕೊಂಡಿದ್ದೇವೆ. ವಿವರಣೆಯನ್ನು ಕೊಡಲು ಅವರಿಗೆ ಸೂಚನೆಯನ್ನು ಕೊಟ್ಟಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಅಲ್ಲಿ ಕನ್ನಡ ಸದಸ್ಯರಿಗೆ ಅನ್ಯಾಯ ಆಗಲಿಕ್ಕೆ ಹತ್ತಿದೆ, ಕನ್ನಡ ಜವರಿಗೆ ಅನ್ಯಾಯ ಆಗಲಿಕ್ಕೆ ಪತ್ತಿದೆ ಎಂದು ಹೇಳುತ್ತಿದ್ದಾರೆ...ವಿವರಗಳು ತತ್‌ಕ್ಷಣ ಇಲ್ಲದಿದ್ದರೂ ಸೂಕ್ತ ಕ್ರಮವನ್ನು ತೆಗೆದುಕೊಂಡು ತಾವು ಸಮಸ್ಯೆಯನ್ನು ಪರಿಹಾರ ಮಾಡಬೇಕು..

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಬೇಕು, ಮಾನ್ಯ ಸದಸ್ಯರು ಇವೊತ್ತು ಅಸೆಂಬ್ಲಿಯ ಪ್ರಸಕ್ತ ಅಧಿವೇಶನದ ಕೊನೆಯ ದಿನದಲ್ಲಿ ಹೀಗೆ ಸಿಟ್ಟಾಗಬಾರದು.

ಶ್ರೀ ಎಸ್.ಆರ್. ಬೊಮ್ಮಾಯಿ—ಮಾನ್ಯ ಸದಸ್ಯರುಗಳು ಈ ವಿಚಾರದಲ್ಲಿ ಬಹಳ ತೀವ್ರವಾದಂತಹ ಭಾವನೆಯನ್ನು ವ್ಯಕ್ತ ಮಾಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರ ಭಾವನೆಯನ್ನು ಕೂಡ ಸರಕಾರ ಒಪ್ಪಿಕೊಂಡಿದೆ. ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕು, ಮುಂದು ಏನು ಕ್ರಮ ತೆಗೆದುಕೊಂಡಿದ್ದೇವೆ ಎಂಬ ಬಗ್ಗೆ ಕಾನೂನು ಮಂತ್ರಿಯವರು ಹೇಳಿದ್ದಾರೆ. ಬೆಳಗಾಂ ನಗರ ಸಭೆಯವರು ಮಾಡಿದ ನಿರ್ಣಯಗಳನ್ನು ಏನು ಮಾಡಿದ್ದಾರೆ, ಅವುಗಳನ್ನು ಒಂದು ವಾರದೊಳಗಾಗಿ ತರಿಸಿಕೊಂಡು ಆ ಕುರಿತು ಮುಂದಿನ ಕ್ರಮದ ಬಗ್ಗೆ ವಿಚಾರ ಮಾಡುತ್ತೇವೆ.

ಶ್ರೀ ಬಾಬುರೆಡ್ಡಿ ಏ. ತುಂಗಳ್.—ಅಧ್ಯಕ್ಷರೇ...ನಗರ ಸಭೆಯ ಕಟ್ಟಡವು ಸರ್ಕಾರಿ ಕಟ್ಟಡ. ಅಲ್ಲಿ ಅವರು ಭಗವಾನ್ ಜಂಡಾವನ್ನು ಹಾರಿಸುತ್ತಿದ್ದಾರೆ.

ಶ್ರೀ ಜಿ. ನಾರಾಯಣಕುಮಾರ್.— ಅಧ್ಯಕ್ಷರೇ, ಬೆಳಗಾವಿ ನಗರಸಭೆಯಂವರ ವರ್ತನೆ ವಿಪರೀತವಾಗಿದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಅಧ್ಯಕ್ಷರೇ, ನಗರ ಸಭೆಯ ಹಕ್ಕು ಏನಿದೆ ಎನ್ನುವುದನ್ನು ನಾವು ವಿಚಾರ ಮಾಡಬೇಕು.

(ಮುಂದಲ)

ಶ್ರೀ ಬಾಬುರೆಡ್ಡಿ ಏ. ತುಂಗಳ್.—ಅವರು ಬೇಕಾದ ಹಾಗೆ ಮಾಡುವುದಕ್ಕೆ ಬರುವುದಿಲ್ಲ.

(ಮುಂದಲ)

ಅಧ್ಯಕ್ಷರು.—ದಯವಿಟ್ಟು ತಾವು ಕುಳಿತುಕೊಳ್ಳಬೇಕು. ಮಾನ್ಯ ಮಂತ್ರಿಯವರು ಮಾತನಾಡಲು ಎದ್ದಾಗ, ಹೀಗೆ ತಾವುಗಳು ಮಾತನಾಡಬಾರದು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಮಂತ್ರಿಗಳವರಿಗೆ ಮಾತನಾಡಲು ನಾವು ಅವಕಾಶ ಕೊಟ್ಟಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಾದ ತುಂಗಳ್‌ರವರು ಬೆಳಗಾಂ ನಗರ ಸಭೆಯ ಮೇಲೆ ಭಗವಾನ್ ಜಂಡಾವನ್ನು ಹಾರಿಸಂತ್ತಿರುವುದರ ಬಗ್ಗೆ ತಮ್ಮ ಕಳವಳ, ಆತಂಕವನ್ನು ವ್ಯಕ್ತ ಮಾಡಿದ್ದಾರೆ. ಕಳೆದ ಸುಮಾರು ೨೦ ವರ್ಷಗಳಿಂದ ಭಗವಾನ್ ಜೆಂಡಾವನ್ನು ಅಲ್ಲಿ ಹಾಕಿರತಕ್ಕಂತಹ ವಿಚಾರ ಇದೆ. ಹಿಂದೆ ಇದ್ದ ಸರಕಾರಗಳು ಈ ಬಗ್ಗೆ ಆಲೋಚನೆ ಮಾಡಬೇಕಾಗಿತ್ತು. ಆದರೂ ಕೂಡ ಈ ಬಗ್ಗೆ ನಾವು ಸೂಕ್ತವಾಗಿ, ಗಂಭೀರವಾಗಿ ಆಲೋಚನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮನೆಗಳ ಮೇಲೆ, ಖಾಸಗಿ ಕಟ್ಟಡಗಳ ಮೇಲೆ ಬೇಕಾದರೆ ಇಂತಹ ಧ್ವಜಗಳನ್ನು ಹಾರಾಡಿಸಿದರೆ ಅದು ಬೇರೆ ವಿಚಾರ. ಸರಕಾರಿ ಕಚೇರಿ ಕಟ್ಟಡಗಳ ಮೇಲೆ ಹಾರಿಸಿದರೆ ಅದನ್ನು ಒಪ್ಪಿಕೊಳ್ಳಲಿಕ್ಕೆ ಆಗುತ್ತದೆಯೇ ?

ಅಧ್ಯಕ್ಷರು.— ಈಗ ಶ್ರೀ ಡಿ. ಟಿ. ಜಯಕುಮಾರ್‌ರವರ ಗಮನ ಸೆಳೆಯುವ ಸೂಚನೆ ಕ್ರಮಾಂಕ ೨೦೪.

IV ನಂಜನಗೂಡು ತಾಲ್ಲೂಕಿನಲ್ಲಿ ಕಾಡಾನೆಗಳ ಹಾವಳಿಯನ್ನು ತಪ್ಪಿಸುವುದು

ಶ್ರೀ ಡಿ. ಟಿ. ಜಯಕುಮಾರ್.—ನಂಜನಗೂಡು ತಾಲ್ಲೂಕಿನಲ್ಲಿ ಕಾಡಾನೆಗಳ ಹಾವಳಿಯಿಂದ ಬೆಳೆಗಳು ನಾಶವಾಗುತ್ತಿರುವ ಬಗ್ಗೆ ನಾನು ಅರಣ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು).—

ನಂಜನಗೂಡು ತಾಲ್ಲೂಕಿನ ಬೇಗೂರು, ಹೆಡಿಯಾಲ ಸುತ್ತಮುತ್ತಲ ಹಳ್ಳಿಗಳಲ್ಲಿ ಬೆಳೆಗಳಿಗೆ ಆಗುತ್ತಿರುವ ಕಾಡಾನೆಗಳ ಹಾವಳಿಯನ್ನು ತಪ್ಪಿಸಲು ಮತ್ತು ಕಾಡಾನೆಗಳನ್ನು ಅರಣ್ಯದಲ್ಲೇ ಸೀಮಿತಗೊಳಿಸಲು ಸುಮಾರು ೧೧.೮೮ ಮಿ. ಉದ್ದದ ಕಂದಕವನ್ನು ತೆಗೆಸಲಾಗಿದೆ. ಈ ಕೆಲಸವನ್ನು ಮುಂದುವರಿಸಲು ಕಾರ್ಯಕ್ರಮವೊಂದನ್ನು ಹಾಕಿಕೊಳ್ಳಲಾಗಿದೆ. ೩೦ ಜನ ಅರಣ್ಯ ವೀಕ್ಷಕರನ್ನು ಕಾಡಾನೆಗಳನ್ನು ಓಡಿಸಲು ನೇಮಿಸಲಾಗಿದೆ ಮತ್ತು ಅವರಿಗೆ ಬಂದೂಕುಗಳನ್ನು ಮತ್ತು ಪಂದ್ಯು ಗುಂಡುಗಳನ್ನು ಕೊಡಲಾಗಿದೆ.

ಸಂಬಂದಪಟ್ಟವರಿಂದ ಬೆಳೆ ಪರಿಹಾರಕ್ಕೆ ಬೇಕಾದ ಪರಿಹಾರವನ್ನು ಕೂಡಲೇ ಕೊಡಲಾಗುತ್ತಿದೆ.

ಶ್ರೀ ಡಿ. ಟಿ. ಜಯಕುಮಾರ್.—ಅಧ್ಯಕ್ಷರೆ, ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕಾಡಾನೆಗಳ ಹಾವಳಿಯನ್ನು ತಪ್ಪಿಸಲು ಈ ಕಂದಕಗಳನ್ನು ತೋಡಿದ್ದಾರೆ. ೧೧.೮೮ ಕಿ.ಮಿ. ಕಂದಕವನ್ನು ತೆಗೆಸಲಾಗಿದೆ ಎಂದು ಹೇಳಿದ್ದಾರೆ. ಈ ಕಂದಕವನ್ನು ಇವೊತ್ತೇ ಹೋಗಿ ಮಾನ್ಯ ಸಚಿವರು ನೋಡಲಿ. ಇಲಾಖೆಯ ಅಧಿಕಾರಿಗಳು ಹೇಗೆ ಕೆಲಸ ಮಾಡಿಸಿದ್ದಾರೆ ಎಂದು ತಿಳಿದುಕೊಳ್ಳಬಹುದು ಈ ಕಂದಕದಲ್ಲಿ ಕುರಿ, ಆಡು, ದನಕರುಗಳು ಕೂಡಾ ಹಾದು ಹೋಗಬಹುದಾಗಿದೆ. ಇಂತಹ ಕಂದಕಗಳನ್ನು ಆನೆಗಳು ದಾಟುವುದು ಕಷ್ಟವೆ ? ಅವುಗಳೂ ದಾಟಿ ಹೋಗುತ್ತವೆ. ಆದುದರಿಂದ ಇಂತಹ ಕಂದಕಗಳನ್ನು ತೋಡಿಸುವುದರಿಂದ ಏನೂ ಪ್ರಯೋಜನ ಇಲ್ಲ. ಈಗ ನಾನು ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ ಅಲ್ಲಿನ ಸುತ್ತಮುತ್ತಲಿನ ಗ್ರಾಮಸ್ಥರನ್ನು ಕೆಲವರನ್ನು ಅಪ್ಪಾಯಿಂಟ್ ಮಾಡಿಕೊಂಡು ವಾಚ್ ಎಂಡ್ ವಾರ್ಡ್ ಹೆಚ್ಚಿಗೆ ಬಿಗಿ ಮಾಡಿದರೆ ಇಂತಹ ಕಡೆ ಇಂತಹ ಆನೆ ಬರುತ್ತದೆ ಎಂದು ಅವರಿಗೆ ಸ್ವಲ್ಪ ತಿಳುವಳಿಕೆ ಕೊಟ್ಟರೆ ಅವರು ನೋಡಿಕೊಳ್ಳುತ್ತಾರೆ. ಇದರ ಮೂಲಕ ಬೆಳೆಗಳಿಗೆ ಆಗತಕ್ಕಂತಹ ನಷ್ಟವನ್ನು ಹತೋಟಿಗೆ ತರಬಹುದು ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.